**ಸಾಕ್ಷಿಯನ್ನು ದಿಃ 02.05.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಿರ್ಯಾದುದಾರರ ಸ್ವ ಇಚ್ಛಾ ಹೇಳಿಕೆ** :

ನನ್ನ ಅತ್ತೆ 2ನೇ ಆರೋಪಿಯು ನನ್ನ ವಿರುದ್ದ ಬಸವನಗುಡಿ ಪೊಲೀಸ್ ಠಾಣೆಯಲ್ಲಿ 2019 ರಲ್ಲಿ ಒಂದು ಸುಳ್ಳು ದೂರನ್ನು ಸಲ್ಲಿಸಿದ್ದರು. ಅದನ್ನು ತನಿಖೆ ನಡೆಸಿದ ಪೊಲೀಸರು ಬಿ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ. ನನ್ನ ಮಾವ 3ನೇ ಆರೋಪಿಯು ನನ್ನ ವಿರುದ್ದ ಬಸವೇಶ್ವರನಗರ ಪೊಲೀಸ್ ಠಾಣೆಯಲ್ಲಿ ಸುಳ್ಳು ದೂರನ್ನು ದಾಖಲಿಸಿದ್ದು ಸದರಿ ಪ್ರಕರಣ ಚಾಲ್ತಿಯಲ್ಲಿರುತ್ತದೆ. ನನ್ನ ನಾದಿನಿ 4ನೇ ಆರೋಪಿಯು ನನ್ನ ವಿರುದ್ದ ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಹಲ್ಲೆಯ ಸಂಬಂಧ ದೂರು ಸಲ್ಲಿಸಿದ್ದು ಅದು ಸಹ ಚಾಲ್ತಿಯಲ್ಲಿರುತ್ತದೆ. ನನ್ನ ಪತ್ನಿ 1ನೇ ಆರೋಪಿಯು ನನ್ನ ವಿರುದ್ದ ಸುಳ್ಳು ವರದಕ್ಷಿಣೆ ಕಿರುಕುಳ ಪ್ರಕರಣ ಮತ್ತು ಜೀವನಾಂಶ ಪ್ರಕರಣಗಳನ್ನು ಸಲ್ಲಿಸಿರುತ್ತಾರೆ. 4ನೇ ಆರೋಪಿಯು ನನ್ನ ವಿರುದ್ದ ಸಿವಿಲ್ ದಾವೆ ಹೂಡಿ ಅದನ್ನು ಹಿಂಪಡೆದಿರುತ್ತಾರೆ. ಆರೋಪಿಗಳು ನನ್ನ ವಿರುದ್ದ ಒಂದಲ್ಲಾ ಒಂದು ಪ್ರಕರಣ ದಾಖಲಿಸಿ ತೊಂದರೆ ನೀಡಿರುತ್ತಾರೆ. ನಮ್ಮ ಕುಟುಂಬದವರ ವಿರುದ್ದ ಸಹ ಆರೋಪಿಗಳು ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ. ಆರೋಪಿಗಳು ನನಗೆ ಸಂಬಂಧಪಟ್ಟ ಚೆಕ್ ಗಳನ್ನು ದುರುಪಯೋಗ ಮಾಡಿಕೊಂಡು ಬೇರೆಯವರಿಂದ ಪ್ರಕರಣಗಳನ್ನು ದಾಖಲಿಸಿ ತೊಂದರೆ ಕೊಡುತ್ತಿದ್ದಾರೆ.

ಈ ದಿನ ಪ್ರಕರಣಕ್ಕೆ ಪೂರಕವಾಗಿ ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

ದಿನಾಂಕಃ24.12.2018 ರ ದೂರಿನ ಪ್ರತಿಯನ್ನು ನಿಸಿ-27 ಎಂದು ಗುರ್ತಿಸಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

**ಓ ಹೇ ಕೇ ಸ ಇ**

**4ನೇ ಅ ಮು ನ್ಯಾ ದಂ ನ್ಯಾ**